| | | |
|---|---|---|
| 6) | ತಾಲ್ಲೂಕು ಮತ್ತು ಇತರೆ ಸ್ಥಳಗಳಲ್ಲಿ ರುವ ವಕೀಲರ ಸಂಘಗಳು | 4,500.00 |

ಆ) ನ್ಯಾಯವಾದಿ ಸಂಘಗಳ ಒಟ್ಟು ಸಂಖ್ಯೆ : 154.

| | | |
|---|---|---|
| 1) | ರಾಜ್ಯಮಟ್ಟ | 2 |
| 2) | ಜಿಲ್ಲಾಮಟ್ಟ | 20 |
| 3) | ತಾಲ್ಲೂಕು ಮಟ್ಟ | 132 |

ಇ)

| ವರ್ಷ | ಆಯವ್ಯಯದಲ್ಲಿ ನೀಡಲಾದ ಮೊತ್ತ |
|---|---|
| 1993-94 | ರೂ. 11,60,000 |
| 1994-95 | ರೂ. 11,60,000 |
| 1995-96 | ರೂ. 11,60,000 |

ಈ) ವಿವಿಧ ಬಾರ್ ಅಸೋಸಿಯೇಷನ್‌ಗಳಿಗೆ ಸರ್ಕಾರ ಕೊಟ್ಟಿರುವ ವಾಸ್ತವಿಕ ಅನುದಾನದ ಮೊತ್ತ.

| 1993-94 | 1994-95 | 1995-96 |
|---|---|---|
| ರೂ. 6,55,500 | ರೂ. 11,54,500 | ರೂ. 11,34,000 (ಧಾರವಾಡದಲ್ಲಿ ಆದ ರಾಜ್ಯ ವಕೀಲರ ಸಮ್ಮೇಳನಕ್ಕೆ ಅನುದಾನ ನೀಡಿದ 5 ಲಕ್ಷ ಮೊತ್ತ ಸೇರಿ) ದಿ:1-3-96ರಂದು ಇದ್ದಂತೆ) |

**ಉದ್ಯೋಗ ಭರವಸೆ ಯೋಜನೆಗೆ ಸಮಿತಿಗಳು**

623 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಉದ್ಯೋಗ ಭರವಸೆ ಯೋಜನೆಯ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳ ರಚನೆಯ ಅವಕಾಶ ಇದೆಯೇ? ಹಾಗಿದ್ದಲ್ಲಿ ಎಷ್ಟು ತಿಂಗಳಿಗೆ ಒಮ್ಮೆ ಸಭೆ ಸೇರಬೇಕು,*

ಅ) ಧಾರವಾಡ ಜಿಲ್ಲಾ ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿ ಇದುವರೆಗೆ ಎಷ್ಟು ಬಾರಿ ಸಭೆ ನಡೆಸಿದ,

ಆ) ಇದುವರೆಗೆ ನಡೆಸದಿದ್ದಲ್ಲಿ ವೇಳೆಗೆ ಸರಿಯಾಗಿ ಈ ಕೂಡಲೇ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇದೆ.

ಆ) ಅವಶ್ಯಕತೆಗನುಗುಣವಾಗಿ ಸಭೆ ಸೇರಬಹುದು.

ಇ) ಒಂದು ಭಾರಿ. (ದಿನಾಂಕ : 7-3-96ರಂದು)

ಈ) ಉದ್ಭವಿಸುವುದಿಲ್ಲ.

**ವಿದ್ಯುಚ್ಛಕ್ತಿ ಮಂಡಲಿಯ ಲೈನ್‌ಮೆನ್ ಕೊರತೆ.**

624 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಲೈನ್ ಮನ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಕೊರತೆಯ ಸಂಖ್ಯೆ ಎಷ್ಟು.

ಇ) 1980ರಲ್ಲಿ ವಿವಿಧ ರೀತಿಯ ಗ್ರಾಹಕರ ಸಂಖ್ಯೆ ಎಷ್ಟು, ರ ಲೈನ್ ಮನ್‌ಗಳ ಸಂಖ್ಯೆ ಎಷ್ಟು.

ಈ) 1995ರ ಕೊನೆಗೆ ಇದ್ದ ವಿವಿಧ ರೀತಿಯ ಗ್ರಾಹಕರ ಸಂಖ್ಯೆ ಎಷ್ಟು ಲೈನ್ ಮನ್ ಗಳ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) 4924.

ಇ) ವಿವಿಧ ರೀತಿಯ ಗ್ರಾಹಕರ ಸಂಖ್ಯೆ 23.03 ಲಕ್ಷ ಲೈನ್ ಮನ್‌ಗಳ ಸಂಖ್ಯೆ: 5969

ಈ) ವಿವಿಧ ರೀತಿಯ ಗ್ರಾಹಕರ ಸಂಖ್ಯೆ 79.93.ಲಕ್ಷ ಲೈನ್ ಮನ್‌ಗಳ ಸಂಖ್ಯೆ: 13,876

**ಧಾರವಾಡ ಕ್ಷೇತ್ರದ ರಸ್ತೆಗಳಿಗೆ ಹಣ ಬಿಡುಗಡೆ.**

626 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?